Doc-471
T-P-2

Reg No P G 155 20 — 4 —75

55th Year of Publication ★ 'Satyavadi' Daily, Mysore 4

In the State – The First
Golden Jubilee
Celebrated Paper
★
News Views, Dharmic
Moral Ethical Matters

ಸತ್ಯವಾದಿ

ರಾಷ್ಟ್ರದಲ್ಲಿ ಪ್ರಥಮ
ಸುವರ್ಣ
ಮಹೋತ್ಸವ
ಸಂಭ್ರಮಿಸಿದ
ದಿನಪತ್ರಿಕೆ

ಸ್ಥಾಪಕರು: ಅರಮನೆ ಸರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಆಕ್ರಮಿತ ಕಾಶ್ಮೀರದಲ್ಲಿ ಸ್ವಯಂಸೇವಕರ ಸೇನಾ ಶಿಕ್ಷಣ

ರಿಸಾ ಸುಲ್ತಾನರಿಂದ ಮೈಸೂರು ಲಾಟರಿ ಟಿಕೆಟ್ ಎತ್ತುವಿಕೆ

ಬೆಳಗ್ಗಾಂವ್‌ನಲ್ಲಿ ಈ ತಿಂಗಳು 16 ನೇ ತಾರೀಖು ಮೈಸೂರು ಲಾಟರಿಯ 33 ನೇ ಡ್ರಾದ ವಿಜಯಶಾಲಿ ಟಿಕೆಟ್‌ಗಳನ್ನು ಚಿತ್ರ ತಾರೆ ರಹನಾ ಸುಲ್ತಾನ ಎತ್ತುತ್ತಿರುವುದು

4 ಪಿ ಎಂ ಪುಟ್ಟಣ್ಣ ಎಕ್ಸ್‌ಪ್ರೆ

ಫೆಡರೇಷನ್ ಇಂಟರ್‌ನ್ಯಾಷನಲ್ ಆಟೊಮೊಬೈಲ್ ಗ್ರ್ಯಾನಲ್ಲಿ ನಡೆದ 23 ನೇ ಅಂತರಾಷ್ಟ್ರೀಯ ಆಟದ ಸಾಮಾನುಗಳ ಪ್ರದರ್ಶನದಲ್ಲಿ ವಿವಿಧ ನೂತನ ಯಾಂತ್ರಿಕ ವಸ್ತುಗಳನ್ನು ಪ್ರದರ್ಶಿಸಿದ್ದರು ; ಪ್ರದರ್ಶಕರು 35 ರಾಷ್ಟ್ರಗಳಿಂದ ಬಂದಿದ್ದರು : 150000 ವಿವಿಧ ನಮೂನೆಯ ಆಟದ ಸಾಮಾನುಗಳನ್ನು ಪ್ರದರ್ಶಿಸಲಾಗಿತ್ತು ; 4 ಸೆಂಟಿಮಾಟರುಗಳ ವಿದ್ಯುತ್ ಎಂಜಿನ್ ರೈಲ್ವೆಗಳ ಮೇಲೆ ಹೋಗುವುದು ಆಕರ್ಷಕವಾಗಿತ್ತು.

(ಯು ಪಿ ಎಸ್)

ವನ್ಯಜೀವಿಗಳು

ನವದೆಹಲಿ— ದೇಶದಲ್ಲಿ ಉಪಯೋಗಿಸುತ್ತಿರುವ ವನ್ಯಜೀವಿಗಳ ಬಗ್ಗೆ ಲೆಕ್ಕಿಸದಿರುವ ಯೋಜನೆಬಗ್ಗೆ ವನ್ಯಜೀವಿ ರಕ್ಷಣಾ ಸಮಿತಿಯ ಕಾರ್ಯಕಾರಿ ಸಮಿತಿ ಕಳವಳವಾಗಿ ಟೀಕಿಸಿದೆ.

ಸಾಹಜಿ ರಾಜೆ ಸ್ಮಾರಕ

ಬೆಂಗಳೂರು— ಶಿವಮೊಗ್ಗಾ ಜಿಲ್ಲೆ ಹೊದಗೆರೆಯಲ್ಲಿರುವ ಶಿವಾಜೀ ತಂದೆ ಸಾಹಜೀ ರಾಜೆಯವರ ಗೋರಿಯ ಮೇಲೆ ಸೂಕ್ತ ಸ್ಮಾರಕ ನಿರ್ಮಿಸಲಾಗುವುದೆಂದು ಮುಖ್ಯ ಮಂತ್ರಿ ದೇವರಾಜ ಅರಸ್‌ರವರು ಹೇಳಿದರು.

●

ಸಮಾಜ ಅಸಮಾನತೆ ಹೋಗಲು

ಕೊಚ್ಚಿ— ದೇಶದಲ್ಲಿ ಸಮಾಜ ಅಸಮಾನತೆ ನಿರ್ಮೂಲಗೊಳಿಸಲು, ಹರಿಜನರು ಎದುರಿಸುವ ಊಟಉಪಚಾರ ಸಮಾರಂಭಗಳಲ್ಲಿ ಭಾಗವಹಿಸಲು ಮತ್ತು ಹರಿಜನರ ಹೋಟೆಲು ಮತ್ತು ಟೀಷಾಪುಗಳಲ್ಲಿ ಆಹಾರ ಸ್ವೀಕರಿಸಲು ಕಾಂಗ್ರೆಸ್ಸಿಗರಿಗೆ ಖುಡ್ಡಾಯವಾಗಬೇಕೆಂದು ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿ ಕರೆಯಿತ್ತಿದೆ.

★

ಕ್ಯಾನಲ್ಲಿ ಶವಗಳು

ಬಿರ್ಮಿಹೋ (ದ. ವಿಯೆಟ್ನಾಂ– ಇಲ್ಲಿಗೆ 19 ಕಿಲೋಮೀಟರು ದೂರದಲ್ಲಿರುವ ಚರು ಭಾಗದಲ್ಲಿ ಸ್ಥಾನದಲ್ಲಿ ಶವಗಳು— ಭೌವ್ವರದು ಬಲಗಡೆ, ಕ್ಯಾಥಲಿಕರದು ಎಡಗಡೆ, ಅಫೀಸರರದು ಮಧ್ಯೆ ಧ್ವಜ ಸುತ್ತಿದ ಶವನಿಟ್ಟಿಗೆಗಳಲ್ಲಿ ಕ್ಯಾನಲ್ಲಿ ನಿಂತಿವೆ – ಪ್ರತಿ ಗಂಟೆಯಲ್ಲೂ ಮಿಲಿಟರಿ ಟ್ರಕ್ಕುಗಳು ಹೊಸ ಶವಗಳನ್ನು ತಂದುಹಾಕುತ್ತಿವೆ.

○

ವಿದೇಶಿ ವ್ಯಾಪಾರ ಸಂಸ್ಥೆಗಳಲ್ಲಿ

ನವದೆಹಲಿ— ಭಾರತದಲ್ಲಿನ ವಿದೇಶೀ ವ್ಯಾಪಾರ ಸಂಸ್ಥೆಗಳಲ್ಲಿ ರೂ. 2001 ಮತ್ತು ಅದಕ್ಕೆ ಹೆಚ್ಚಿನ ಸಂಬಳದ ಭಾರತೀಯರು 9209 ಜನರಿರುವರೆಂದು ಲೋಕ ಸಭೆಯಲ್ಲಿ ತಿಳಿಸಲಾಯಿತು.

★

ಪಾಕ್ ಆಕ್ರಮಿತ ಕಾಶ್ಮೀರದಲ್ಲಿ

ಲಂಡನ್— ಪಾಕಿಸ್ತಾನ ಆಕ್ರಮಿಸಿರುವ ಕಾಶ್ಮೀರ ಭಾಗದಲ್ಲಿ 2 ಲಕ್ಷ ಸ್ವಯಂ ಸೇವಕರಿಗೆ ಮಿಲಿಟರಿ ತರಬೇತು ಕೊಡಲಾಗುತ್ತಿವೆಯೆಂದು ಡೇಲಿ ಟಿಲಿಗ್ರಾಫ್ ಪತ್ರಿಕೆಗೆ ಮುಜಫರಾಬಾದಿನಿಂದ ಬಂದಿರುವ ವರದಿ ತಿಳಿಸುತ್ತದೆ.

○

ವಿಶ್ವ ಜನಸಂಖ್ಯೆ

ನ್ಯೂಯಾರ್ಕ್ (ಐ ಪಿ ಎಫ್) — ಸಂಯುಕ್ತರಾಷ್ಟ್ರ ಸಂಸ್ಥೆ ಪ್ರಕಟಿಸಿರುವ ಪುಸ್ತಕವೊಂದರಂತೆ ಪ್ರಪಂಚದಲ್ಲಿ ಈಗ 3660 ದಶಲಕ್ಷ ಜನವಿದ್ದಾರೆ; " 2000" ವರ್ಷದಲ್ಲಿ ಇದು 6400 ದಶಲಕ್ಷ ಕ್ಕೇರುತ್ತದೆ.

●

ಉಪ ಸಮಿತಿ ರಚನೆ

ಹಿಂದುಳಿದ ವರ್ಗಗಳ ಬಗೆಗೆ ಸರ್ಯಾಲೋಚನೆಗೆ ರಾಜ್ಯ ಸರ್ಕಾರ ಉಪಸಮಿತಿ ರಚಿಸಿದೆ ಎಂದು ಬೆಂಗಳೂರು ವಾರ್ತೆ.

ವಿರೋಧಿ ಸದಸ್ಯರ ಟೀಕೆ

ಮೈಸೂರು ಜಿಲ್ಲಾಧಿಕಾರಿಯವರು ಖಾಸಗಿಯವರಿಗೆ ಸಕ್ಕರೆ ಮತ್ತು ಗೋಧಿಯ ಒಟ್ಟಾರೆ ಹಂಚಿಕೆ ಕೊಟ್ಟಿರುವುದನ್ನು ಪುರಸಭೆಯಲ್ಲಿ ವಿರೋಧಿ ಸದಸ್ಯರು ತೀವ್ರವಾಗಿ ಟೀಕಿಸಿದರು.

★

ಪ್ರಧಾನರ ಸ್ವಹೊಗಳಿಕೆ

ಭಾರತದ ಮೇಲೆ ಮತ್ತೊಂದು ಆಕ್ರಮಣವನ್ನು ಪಾಕೀಸ್ತಾನ ಮಾಡುವದಿಲ್ಲವೆಂದು ಖಡಾಖಂಡಿತವಾದರೆ ಮಾತ್ರ ಭಾರತ ಹಾಗೂ ಪಾಕೀಸ್ತಾನದ ಸಂಬಂಧವು ಸಾಧಾರಣಗೊಳ್ಳುವುದೆಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ನವದೆಹಲಿಯಲ್ಲಿ ತಿಳಿಸಿದರು.

★

ಭೂ ಸುಧಾರಣೆ ಬಗ್ಗೆ ಇಂದಿರಾ

ನಾವು ಭೂ ಸುಧಾರಣೆ ಜಾರಿಗೆ ತರದೇ ಇದ್ದರೆ ಬಡವರು ಪ್ರಜಾರಾಜ್ಯ ರೀತ್ಯ ಇದು ಬಹಳಾವಣೆಗೊಳ್ಳಲಾರದೆಂದು ಯೋಚಿಸಿ ಅದನ್ನು ಪಡೆಯಲು ಬೇರೆ ಮಾರ್ಗ ಯೋಚಿಸುವರೆಂದು ಪ್ರಧಾನಿ ಇಂದಿರಾ ಹೈದರಾಬಾದಿನಲ್ಲಿ ಶಾಸನ ಸಭೆ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ತಿಳಿಸಿದರು.

★

ಬ್ಯಾಂಕುಗಳ ಪ್ರಗತಿ

72–74 ರ 3 ವರ್ಷಗಳಲ್ಲಿ ರಾಷ್ಟ್ರೀಕರಣ ಬ್ಯಾಂಕುಗಳ ಗ್ರಾಮೀಣ ಶಾಖೆಗಳನ್ನು ಮತ್ತೆ ತೆರೆಯಲಾಗುವುದೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

○

ಭಾರತದ ನಿರ್ಧಾರ

ರಕ್ಷಣಾ ಸಲಕರಣೆಗಳನ್ನು ಹೆಚ್ಚುಹೆಚ್ಚಾಗಿ ರಫ್ತು ಮಾಡಲು ಭಾರತ ನಿರ್ಧರಿಸಿರುವುದೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಜಾಗೇರ್ ಕಣಿವೆ ಪ್ರಾಣಿಧಾಮ

ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ 84 45 ಚದುರ ಮೈಲಿ ಪ್ರದೇಶದಲ್ಲಿ ಜಾಗೇರ್ ಕಣಿವೆ ಪ್ರಾಣಿಧಾಮ ನಿರ್ಮಾಣದ ರೂ 40 ಲಕ್ಷ ಯೋಜನೆ ಸಿದ್ಧವಾಗಿದೆ.

ಹಾಲಿನ ಘಟಕ

ಬೀದರ್ ಜಿಲ್ಲೆಯಲ್ಲಿ – ಹೆಚ್ಚಾಗಿರುವ ಹಸುವಿನ ಹಾಲಿನಿಂದ 'ಪೂರ್ಣ ಘನೀಕೃತ" ಹಾಲನ್ನು ತಯಾರಿಸಲು ಹಾಲಿನ ಘಟಕವೊಂದನ್ನು ಪ್ರಾರಂಭಿಸಬೇಕೆಂದು ಸೂಚಿಸಲಾಗಿದೆ ; ಪ್ರಸ್ತುತ ಹೆಚ್ಚಿನ ಹಾಲನ್ನು ನೆರೆ ರಾಜ್ಯಗಳಾದ ಮಹಾರಾಷ್ಟ್ರ ಮತ್ತು ಆಧ್ರಪ್ರದೇಶಕ್ಕೆ ಕಳುಹಿಸಲಾಗುತ್ತಿದೆ. (ಜನಪದ)

ಎಕ್ಸಿಕ್ಯುಟೀವ್ ಇಂಜಿನಿಯರ್‌ರವರ ಕಚೇರಿ,
ಸಿಟಿ ಮುನಿಸಿಪಲ್ ಕೌನ್ಸಿಲ್,
ಮೈಸೂರು ತಾ|| 13 ನೇ ಏಪ್ರಿಲ್ 1972

ನಂ. ಡಿ 2 ಟಿ ಎ/23/72–73

ಟೆಂಡರ್ ಪ್ರಕಟಣೆ

ಮೈಸೂರು ಲೋಕೋಪಯೋಗಿ ಇಲಾಖೆಯಲ್ಲಿ ಅಂಗೀಕೃತವಾಗಿರುವ ರಿಜಿಸ್ಟರ್ ಆದ ಕಂಟ್ರಾಕ್ಟರ್‌ಗಳಿಂದ 5-5-1972 ರ ಮಧ್ಯಾಹ್ನ 4 ಗಂಟೆ ವರೆಗೆ ಈ ಕೆಳಗೆ ಸಹಿ ಮಾಡಿರುವವರಿಂದ ಮೊಹರಾದ ಟೆಂಡರ್‌ಗಳನ್ನು ದ್ವಿಪ್ರತಿಗಳಲ್ಲಿ ಸ್ವೀಕರಿಸಲಾಗುವುದು. ಸ್ವೀಕರಿಸಲಾದ ಟೆಂಡರ್‌ಗಳನ್ನು ಸಾಧ್ಯವಾದಷ್ಟೆ ಅದೇ ದಿನ ತೆರೆಯಲಾಗುವುದು. ಟೆಂಡರ್ ಫಾರಂಗಳ ದರವಾದ ರೂ 10/– ನ್ನು ಪಾವತಿ ಮಾಡಿದ ಬಗ್ಗೆ ಮುನಿಸಿಪಲ್ ಖಜಾನೆಯ ದ್ವಿಪ್ರತಿ ಚಲನ್‌ನನ್ನು ಹಾಜರು ಪಡಿಸಿದಲ್ಲಿ 4-5-1972 ರ ವರೆಗೆ ಕೆಲಸದ ಎಲ್ಲ ದಿನಗಳಲ್ಲಿ ಕಚೇರಿ ಕೆಲಸದ ವೇಳೆಗಳಲ್ಲಿ ಟೆಂಡರ್ ಫಾರಂಗಳನ್ನು ಕೊಡಲಾಗುವುದು. ಮುನಿಸಿಪಲ್ ಖಜಾನೆಗೆ ಇ ಎಂ ಡಿ. ಯನ್ನು ನಗದಾಗಿ ಮಾತ್ರ ಪಾವತಿ ಮಾಡಬೇಕು. ಚಕ್, ಪಾಯಂ ಠೇವಣಾತಿ ಇತ್ಯಾದಿಗಳ ಮೂಲಕ ಯಾವುದೇ ವಿಧವಾಗಿ ಪಾವತಿ ಮಾಡಿದರೂ ಅದು ಅಂಗೀಕರಿಸಲ್ಪಡುವುದಿಲ್ಲ ಯಾವುದೇ ಅಥವಾ ಎಲ್ಲ ಟೆಂಡರ್‌ಗಳನ್ನು ಯಾವುದೇ ಕಾರಣ ಕೊಡದೆ ನಿರಾಕರಿಸುವ ಹಕ್ಕು ಟೆಂಡರ್ ಒಪ್ಪಿಕೊಳ್ಳಲು ತಕ್ಕ ಅಧಿಕಾರವುಳ್ಳ ಅಧಿಕಾರಿಯವರಿಗೆ ಮೀಸಲಾಗಿದೆ. ಇತರ ಷರತ್ತುಗಳು ಮಾಮೂಲಿನಂತೆ.

ಸೀ ಕೆಲಸದ ಹೆಸರು ನಂ	ಟೆಂಡರ್ ಮೊತ್ತ	ಇ ಎಂ ಡಿ	ಕಾಲಾವಧಿ	ಕಂಟ್ರಾಕ್ಟರ್ ಹಗರ
1 ಡಿ. ಕೆ. ರಸ್ತೆಯ ಗಾಡಿ ಚೌಕದಲ್ಲಿ ಅಸ್ತೀಕ ಮಹಡಿ ಕಟ್ಟಡ ನಿರ್ಮಿಸುವುದು.	80,500/–	2012/–	10 ತಿಂಗಳು	3 ಮತ್ತು ಮೇಲ್ಪಟ್ಟು
2 ಆಕ್ಟ್ರಾಯಿ ಕಚೇರಿ ಕಾಂಪೌಂಡ್‌ನಲ್ಲಿ ಗೋಡೌನ್ ನಿರ್ಮಾಣದ ಉಳಿಕೆ ಕೆಲಸ ಮಾಡುವುದು	30,000/–	750/–	6 ತಿಂಗಳು	4 ಮತ್ತು ಮೇಲ್ಪಟ್ಟು

ಸಹಿ/– ಕೆ. ಎಸ್. ಸಿದ್ಧಲಿಂಗಪ್ಪ,
ಮುನಿಸಿಪಲ್ ಎಕ್ಸಿಕ್ಯುಟೀವ್ ಇಂಜಿನಿಯರ್,
ಸಿ. ಎಂ ಸಿ., ಮೈಸೂರು.

Contribute Liberally

to the National Defence Fund

ವುಡ್‌ಲ್ಯಾಂಡ್ 28-4-72 ರಿಂದ ಆಮೋಘ 2ನೇ ವಾರ

ವರ್ಣರಂಜಿತ ಹಿಂದಿ ಚಿತ್ರ

ಮೇರೆ ಹಮ್‌ಸಫರ್

ಪಾತ್ರ : ಜಿತೇಂದ್ರ, ಶರ್ಮಿಳಾ ಟಾಗೂರ್, ಬಾಲರಾಜ ಸಹಾನಿ

ನಿರ್ದೇಶನ – ದುಲಾಲ್ ಗುಹ ಸಂಗೀತ – ಕಲ್ಯಾಣಜಿ ಆನಂದಜಿ

ಪ್ರತಿ ದಿನ 3 ಪ್ರದರ್ಶನಗಳು

ಬೆಳಿಗಿನ ಪ್ರದರ್ಶನ ಪ್ರತಿ ದಿನ 10–30 ನಂದಾದೀಪ

ಅಪೆರಾ 3 ನೇ ವಾರ

..... ಅತ್ಯಮೋಘ ಕನ್ನಡ ಚಿತ್ರ ....

ಯಾವ ಜನ್ಮದ ಮೈತ್ರಿ

ತಾರಾಗಣ— ಗಂಗಾಧರ್, ಕೆ. ಎಸ್. ಅಶ್ವತ್ಥ್, ಕಲ್ಪನಾ

ಸಂಗೀತ : ವಿಜಯಭಾಸ್ಕರ ಚಿತ್ರಕಥೆ – ನಿರ್ದೇಶನ : ಗೀತಪ್ರಿಯ

SHAKTI

SUDHA

A Superb Tonic

A Large Range of Daily Wear

Cotton Voile etc., Sarees

in up – to – Date Designs

VISIT: Bank Road Bahusar

Protect the Cow

Edited Printedand Published by Dharmapracharanirata M S Krishna Rao (Propretor) at the Satyavadi Press Chamarajapuram Mysore 4